ಇದ್ದರೆ, ಖಂಡಿತವಾಗಿಯೂ ನಾವು ತುಂಬಾ ಕಷ್ಟ ಅನುಭವಿಸಬೇಕಾಗುತ್ತದೆ; ಆ ಕಾರಣಕ್ಕೆ ನಾನು ಮಾನ್ಯ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಇದಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ಒದಗಿಸಬೇಕು, ಇವತ್ತು ಮಂತ್ರಿಗಳು ಬಹಳ ಹುರುಪಿನಿಂದ ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ, ಹಣಕಾಸಿನ ನೆರವಿಲ್ಲದೆ ಏನು ಮಾಡುವುದಕ್ಕೆ ಸಾಧ್ಯವಿದೆ? ಆ ಕಾರಣಕ್ಕೆ ಹಣಕಾಸಿನ ನೆರವು ಮಾಡಬೇಕೆಂದು ಹೇಳುತ್ತೇನೆ. ಇನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ಮೇಲೆ ನೀವು ಸರಿಯಾಗಿ ನಿಯಂತ್ರಣವನ್ನು ಇಡಿ. ಅವರು ಎಲೆಲ್ಲಿ ಅಡ್ಡಾಡುತ್ತಾರೆ, ಏನೇನು ಕೆಲಸ ಮಾಡುತ್ತಾರೆ? ಹಿಂದೆ ರಿವ್ಯೂ ಮಾಡಿ ನೋಡಿದ್ದೇವೆ. ಅವರಿಗೇನು ಕೆಲಸವಿಲ್ಲ, ಏನೂ ಮಾಡುತ್ತಾ ಇಲ್ಲ. ಖಂಡಿತವಾಗಿಯೂ ಮಾಲಿನ್ಯ ನಿಯಂತ್ರಣ ಮಂಡಳಿ ಕೆಲಸ ಮಾಡುತ್ತಿಲ್ಲ, ಅದಕ್ಕೆ ಹೆಚ್ಚು ಒತ್ತು ಕೊಟ್ಟು, ಅದಕ್ಕೆ ಅಧ್ಯಕ್ಷರನ್ನು ಈಗಲೇ ಮಾಡುತ್ತಿರೋ ಮುಂದೆ ಮಾಡುತ್ತಿರೋಗೊತ್ತಿಲ್ಲ, ಅದಕ್ಕೆ ಒಳ್ಳೆಯ ಕೆಲಸವನ್ನು ಮಾಡುವವರನ್ನು ಅಧ್ಯಕ್ಷರನ್ನಾಗಿ ಮಾಡಿ, ಆ ಮಾಲಿನ್ಯ ನಿಯಂತ್ರಣ ಮಂಡಳಿಗೆ ಹೆಚ್ಚು ಶಕ್ತಿ ಕೊಟ್ಟು, ಹಿಚ್ಚಿನ ಹಣಕಾಸಿನ ನೆರವನ್ನು ಕೊಟ್ಟು ಈ ರಾಜ್ಯದ ಮಾಲಿನ್ಯನಿಯಂತ್ರಣ ಮಾಡತಕ್ಕಂಥ ಪ್ರಯತ್ನ ಮಾಡಬೇಕೆಂದು ಹೇಳುತ್ತಾ ನನ್ನ ಚರ್ಚೆಯನ್ನು ನಾಳೆ ಮುಂದುವರೆಸುತ್ತೇನೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

7. ಪ್ರಶ್ನೋತ್ತರಗಳು

(ಅ) ಚುಕ್ಕೆಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು.

ಚುಕ್ಕೆಗುರುತಿನ ಪ್ರಶ್ನೆ ಸಂ. 5938

ಛೇರ್ಮನ್ : ಮೊದಲನೆಯದಾಗಿ, ಮಾನ್ಯ ಸದಸ್ಯರಾದ ಗೋವಿಂದ ಎಂ ಕಾರ್ಜೋಳರ ಪ್ರಶ್ನೆಗೆ ಮಾನ್ಯ ಕಂದಾಯ ಸಚಿವರು ಕಾಲಾವಕಾಶ ಕೊಡಿ ಎಂದು ಕೇಳಿದ್ದಾರೆ, ಏಕೆಂದರೆ, ಇಡೀ ರಾಜ್ಯಾದ್ಯಂತ, ಎಲ್ಲಾ ಕ್ಷೇತ್ರವಾರು ವಿವರಗಳನ್ನು ಒದಗಿಸಿ ಎಂದು ಕೇಳಿದ್ದೀರಿ, ಮಾನ್ಯ ಕಂದಾಯ ಸಚಿವರು ಈ ಸದನ ಮುಗಿಯುವುದರೊಳಗೆ ಉತ್ತರ ತರಿಸಿಕೊಡಬೇಕು.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ತಾಲ್ಲೂಕುವಾರು ವಿವರಗಳನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ರಾಜ್ಯದ ಹರಿಜನ ಕಾಲೋನಿಗಳಲ್ಲಿರುವ ದೇವಸ್ಥಾನಗಳ ವಿವರಗಳ ಬಗ್ಗೆ ಇಡೀ ತಾಲ್ಲೂಕುಮಟ್ಟದ ವಿವರಗಳನು ತೆಗೆದುಕೊಳ್ಳಬೇಕಾಗುತ್ತದೆ. ಆದಷ್ಟು ಬೇಗ ನಾನು ಪ್ರಯತ್ನ ಮಾಡಿ, ಈ ಸದನ ಮುಗಿಯುವುದರೊಳಗಾಗಿ ಉತ್ತರವನ್ನು ತರಿಸಿಕೊಡುತ್ತೇನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂ. 5960

(ಮಾನ್ಯ ಸದಸ್ಯರದ ಶ್ರೀ ಹೆಚ್.ಹಾಲಪ್ಪನವರು ಹಾಜರಿರಲಿಲ್ಲ)

ಗ್ರಾಮೋದ್ಯೋಗ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ಮಾಲುಗಳಿಗೆ ವ್ಯಾಟ್‌ನಿಂದ ರಿಯಾಯಿತಿ.

543(5798) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಮಾನ್ಯ ಉಪ ಮುಖ್ಯಮಂತ್ರಿಯವರೆ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮೋದ್ಯೋಗ ಕೈಗಾರಿಕಾ ಅಡಿ ನಡೆಯುತ್ತಿರುವ ಉದ್ದಿಮೆಗಳಿಗೆ ಬೇಕಾಗುವ ಕಚ್ಚಾಮಾಲು(ಕುಸುಬೆಕಾಳು) ಹಾಗೂ ಉತ್ಪಾದನೆಯಾದ ಎಣ್ಣೆ ಮತ್ತು ಹಿಂಡಿಗಳು ವ್ಯಾಟ್‌ನ ವ್ಯಾಪ್ತಿಗೆ ಒಳಪಡುವುದೇ;

ಆ) ಹಾಗಿದ್ದಲ್ಲಿ, ಇವುಗಳಿಗೆ ವಿಧಿಸಿರುವ ದರವೆಷ್ಟು;

ಇ) ವ್ಯಾಟ್‌ನಿಂದಾಗಿ ಗೃಹ ಕೈಗಾರಿಕೆಗಳನ್ನು ನಡೆಸುವುದು ತುಂಬಾ ಕಷ್ಟದಾಯಕವಾಗಿದ್ದು ನಷ್ಟ ಅನುಭವಿಸುತ್ತಿರುವ ಉದ್ದಿಮೆಗಳು ಮುಚ್ಚಿ ಲಕ್ಷಾಂತರ ಜನರು ನಿರುದ್ಯೋಗಿಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಕಚ್ಚಾಮಾಲಿಗೆ ಹಾಗೂ ಖರೀದಿಕರ, ಉತ್ಪಾದನೆಯಾದ ಎಣ್ಣೆ ಮತ್ತು ಹಿಂಡಿಗಳಿಗೆ ವ್ಯಾಟ್‌ನ ವ್ಯಾಪ್ತಿಯಿಂದ ವಿನಾಯಿತಿ ನೀಡಲು ಸರ್ಕಾರ ಕೈಗೊಂಡ ಕ್ರಮವೇನು;

ಉ) ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಬೆಳೆಸಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು) :

ಅ) ಹೌದು

ಆ) ಕುಸುಬೆಕಾಳು, ಅಡಿಗೆ ಎಣ್ಣೆ ಮತ್ತು ಎಣ್ಣೆ ಹಿಂಡಿಯ ಮೇಲೆ ಶೇಕಡ 4ರ ದರದಲ್ಲಿ ಮೌಲ್ಯವರ್ಧಿತ ತೆರಿಗೆ ವಿಧಿಸಲಾಗಿದೆ.

ಇ) ಇಲ್ಲ. ಏಕೆಂದರೆ ದಿನಾಂಕ : 01–05–2005 ರಿಂದ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ಉತ್ಪನ್ನಗಳ ಮಾರಾಟದ ಮೇಲೆ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ತೆರಿಗೆ ವಿನಾಯಿತಿ ನೀಡಲಾಗಿರುತ್ತದೆ.

ಈ) ಈಗಾಗಲೇ ಹೇಳಿದಂತೆ, ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳು ಉತ್ಪಾದಿಸುವ ಎಣ್ಣೆ ಮತ್ತು ಹಿಂಡಿಗೆ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ತೆರಿಗೆ ವಿನಾಯಿತಿಯನ್ನು ಈಗಾಗಲೇ ನೀಡಲಾಗಿರುತ್ತದೆ. ಕಚ್ಚಾ ಮಾಲಿನ ಮೇಲೆ ತೆರಿಗೆ ವಿನಾಯಿತಿ ನೀಡಲು ಯಾವುದೇ ಸಕಾರಣಗಳಿರುವುದಿಲ್ಲ.

ಉ) ಅನುಬಂದ 'ಎ' ನಲ್ಲಿ ನೀಡಲಾಗಿದೆ.

ಅನುಬಂದ–ಎ

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಗ್ರಾಮೀಣ ಪ್ರದೇಶಗಳಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ಪ್ರೋತ್ಸಾಹ ನೀಡುವ ಸಲುವಾಗಿ ಮಾರ್ಜಿನ ಮನಿ (ಅಂಚುಹಣ) ಯೋಜನೆಯ ಆಯ್ದ ಸಹಕಾರಿ ಬ್ಯಾಂಕುಗಳು/ ಖಾಸಗಿ ಷೆಡ್ಯೂಲ್ ಬ್ಯಾಂಕುಗಳು/ಗ್ರಾಮೀಣ ಬ್ಯಾಂಕುಗಳ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಜಾರಿಗೋಳಿಸಲಾಗುತ್ತದೆ.

ಈ ಯೋಜನೆಯಡಿಯಲ್ಲಿ ವೈಯುಕ್ತಿಕ ಕಸುಬುದಾರರಿಗೆ /ಸಂಘ/ಸಂಸ್ಥೆಗಳಿಗೆ ಬ್ಯಾಂಕಿನಿಂದ ಗರಿಷ್ಟ 25.00 ಲಕ್ಷ (ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳವರೆವಿಗೂ ಸಾಲ ಪಡೆಯಲು ಅವಕಾಶ ಇದ್ದು ಒಟ್ಟು ಯೋಜನಾ ವೆಚ್ಚದ ಬಾಬ್ತು ರೂ.10.00 ಲಕ್ಷ (ಹತ್ತು ಲಕ್ಷ ರೂಪಾಯಿಗಳು ಮಾತ್ರ) ಗಳವರೆವಿಗೂ ಸಾಮಾನ್ಯ ವರ್ಗಕ್ಕೆ ಯೋಜನಾ ವೆಚ್ಚದ ಶೇಕಡಾ 25ರಷ್ಟು ಹಾಗೂ ವಿಶೇಷ ವರ್ಗಕ್ಕೆ ಶೇಕಡಾ 30 ರಷ್ಟು ಹಣ ಸೌಲಭ್ಯ ಪಡೆಯಬಹುದು. ವಿಶೇಷ ವರ್ಗದಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ/ಹಿಂದುಳಿದ ಜಾತಿ/ಹಿಂದುಳಿದ ವರ್ಗ/ಮಾಜಿ ಸೈನಿಕರು/ಅಲ್ಪ ಸಂಖ್ಯಾತರು ಹಾಗೂ ಮಹಿಳೆಯರು ಇರುತ್ತಾರೆ.

ಅಂಚು ಹಣ ಯೋಜನೆಯಡಿಯಲ್ಲಿ 2005–06ನೇ ಸಾಲಿನಲ್ಲಿ 910 ಘಟಕಗಳ ಸ್ಥಾಪನೆಗೆ ಗುರಿಯನ್ನು ಹೊಂದಲಾಗಿದ್ದು 18192 ಜನರಿಗೆ ಹೊಸಕಾಗಿ ಉದ್ಯೋಗವನ್ನು ಸೃಷ್ಟಿಸಲು ಯೋಜಿಸಲಾಗಿರುತ್ತದೆ. ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಅಭಿವೃದ್ದಿಪಡಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವಿಶ್ವ ಯೋಜನೆಯಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) **ವಿಶ್ವ** : ಮೂಲಭೂತ ಸೌಕರ್ಯ ಕಚ್ಚಾ ಪದಾರ್ಥಗಳ ಪೂರೈಕೆ ಮತ್ತು ಮಾರಾಟವ್ಯವಸ್ಥೆಯನ್ನು ಒದಗಿಸಿ ಗ್ರಾಮಾಂತರ ಪ್ರದೇಶದ ಜನತೆಗೆ ಪೂರೈಕೆ ಮತ್ತು ಮಾರಾಟ ಕಲ್ಪಿಸಲು ಈ ಯೋಜನೆಯನ್ನು ಮುಖ್ಯವಾಗಿ ರೂಪಿಸಲಾಗಿದೆ.

ವಿವಿಧ ಕುಶಲಕರ್ಮಿ ಆಧಾರಿತ ಚಟುವಟಿಕೆಗಳಲ್ಲಿ ಕೌಶಲ್ಯಭಿವೃದ್ದಿ ತರಬೇತಿಯನ್ನು ಸರ್ಕಾರೇತರ ಸಂಸ್ಥೆ ಮತ್ತು ತೆಂಗಿನ ನಾರು, ಜವಳಿ, ಚರ್ಮ ವಸ್ತು ತಯಾರಿಕೆ, ಕರಕುಶಲ ವಸ್ತುಗಳಿಗೆ ಸಂಬಂಧಿಸಿದ ನಿಗಮ ಮಂಡಳಿಗಳ ಮೂಲಕ ನೀಡಲಾಗುತ್ತಿದೆ.

ಉತ್ತಮ ಸರ್ಕಾರ/ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಗ್ರಾಮೀಣ ಅಭಿವೃದ್ಧಿ ಪೂರಕವಾದ ತರಬೇತಿ ಕಾರ್ಯದಲ್ಲಿ ತೊಡಗಿರುವವರಿಗೆ ಮೂಲಭೂತ ಸೌಕರ್ಯಕ್ಕಾಗಿ ಅನುದಾನವನ್ನು ನೀಡಲಾಗುತ್ತಿದೆ. ವಿಶೇಷವಾಗಿ ಗ್ರಾಮೀಣಾಭಿವೃದ್ಧಿ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಸ್ಥೆಗಳ ಸ್ಥಾಪನೆಗೆ ತಲಾ ಚಟುವಟಿಕೆಗಳಿಗೆ ಕಾರ್ಯಗಾರವನ್ನು ಬಳಸಲಾಗುತ್ತಿದೆ.

2) **ಕಾಯಕನಗರ** : ವೃತ್ತಿನಿರತ, ವಸತಿರಹಿತ ಹಾಗೂ ನಿವೇಶನ ತಹಿತ ಕುಶಲಕರ್ಮಿಗಳಿಗೆ ವಸತಿ ಸೌಕರ್ಯ ಹಾಗೂ ಸಾಮೂಹಿಕ ಕಾರ್ಯಗಾರವನ್ನು ಕಲ್ಪಿಸಲು ಕಾಯಕನಗರ ಎಂಬ ಯೋಜನೆಯನ್ನು ದಿನಾಂಕ : 30–03–2000ರ ಸರ್ಕಾರ ಆದೇಶದ ಮೂಲಕ ಜಾರಿಗೊಳಿಸಿದೆ. ಪ್ರಸ್ತುತ ಮೂರು ಜಿಲ್ಲೆಗಳಲ್ಲಿ ಈ ಯೋಜನೆಯ ಅನುಷ್ಟಾನಕ್ಕೆ ಕ್ರಮಕೈಗೊಂಡಿದ್ದು.

ವಿವರಗಳು ಕೆಳಕಂಡಂತಿವೆ.

1) ನರೇಂದ್ರಗ್ರಾಮ, ಧಾರವಾಡ ಜಿಲ್ಲೆ.
2) ಹೂವಿನಗಡಗಲಿ, ಬಳ್ಳಾರಿ ಜಿಲ್ಲೆ.
3) ರಾಮದುರ್ಗ, ಬೆಳಗಾಂ ಜಿಲ್ಲೆ.

ಮೇಲಿನ ಮೂರು ಕೇಂದ್ರಗಳಲ್ಲಿ ಈಗಾಗಲೇ ಜಮೀನನ್ನು ಖರೀದಿಸಿದ್ದು. ಕೆ.ಎಸ್.ಎಸ್.ಐ.ಡಿ.ಸಿ.ಗೆ ಭೂಅಭಿವೃದ್ಧಿ ಕಾರ್ಯವನ್ನು ಮತ್ತು ವಸತಿ ಕಾರ್ಯಗಾರ ಹಾಗೂ ಸಾಮೂಹಿಕ ಕಾರ್ಯಗಾರದ ನಿರ್ಮಾಣ ಕಾರ್ಯವನ್ನು ರಾಜೀವ್‌ಗಾಂಧಿ ವಸತಿ ಅಭಿವೃದ್ಧಿ ನಿಗಮಕ್ಕೆ ನೀಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಈ ಕಾರ್ಯಗಳು ಪೂರ್ಣಗೊಂಡ ನಂತರ ಈಗಾಗಲೇ ಗುರುತಿಸಿರುವ ಕುಶಲಕರ್ಮಿಗಳಿಗೆ ಹಂಚಿಕೆ ಮಾಡಲಾಗುವುದು.

ಶ್ರೀ ಅಪ್ಪಸಾಹೇಬ್ ಮಲ್ಲಪ್ಪ : ಮಾನ್ಯ ಸಭಾಧ್ಯಕ್ಷರೆ, ಗ್ರಾಮೋದ್ಯೋಗ ಮತ್ತು ಗುಡಿ ಕೈಗಾರಿಕೆಯಲ್ಲಿ ಉತ್ಪನ್ನವಾಗುವ ಕುಸುಬಿಕಾಳು ಹಾಗೂ ಎಣ್ಣೆ, ಹಿಂಡಿಯ ಮಾರಾಟದ ಮೇಲೆ ವ್ಯಾಟ್ ಅಡಿಯಲ್ಲಿ ನಾಲ್ಕು ಪರ್ಸೆಂಟ್ ಮೌಲ್ಯಾಧಾರಿತ ತೆರಿಗೆಯನ್ನು ವಿಧಿಸಲಾಗಿದೆ, ಅದರ ಬಗ್ಗೆ ಎರಡೂ ಉತ್ತರ ಬಂದಿದೆ, ಒಂದರಲ್ಲಿ ಇಲ್ಲವೆಂದುಬಂದಿದೆ ಇನ್ನೊಂದರಲ್ಲಿ ವಿಧಿಸಲಾಗಿದೆ, ಎಂದು ಬಂದಿದೆ ಈ ಬಗ್ಗೆ ಸ್ಪಷ್ಟೀಕರಣ ಕೊಟ್ಟರೆ ಆಮೇಲೆ ನಾನು ಮಾತನಾಡುತ್ತೇನೆ.

ಡಾ : ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): (ಉಪಮುಖ್ಯಮಂತ್ರಿಯವರ ಪರವಾಗಿ) ನ್ಯಾಶನಲ್ ಎಂಪವರ್ ಕಮಿಟಿಯ ಪ್ರಕಾರ, ಕುಸುಬೆಕಾಳು, ಅಡಿಗೆ ಎಣ್ಣೆ ಮತ್ತು ಎಣ್ಣೆ ಹಿಡಿಯ ಮೇಲೆ ನಾಲ್ಕು ಪರ್ಸೆಂಟ್ ತೆರಿಗೆ ಏನು ಇದೆ, ಆ ಕಮಿಟಿ ಏನು ತೀರ್ಮಾನ ತೆಗೆದುಕೊಂಡಿದೆ, ಅದರ ಆಧಾರದ ಮೇಲೆ ತೀರ್ಮಾನವಾಗಿದೆ. ಆದುದರಿಂದ ಇವರಿಗೇನೂ ಅನಾನುಕೂಲವಾಗುವುದಿಲ್ಲವೆಂದು ಅವರ ಪ್ರಶ್ನೆಗೆ ಉತ್ತರವನ್ನು ಒದಗಿಸಿಕೊಡಲಾಗಿದೆ.

ಶ್ರೀ ಅಪ್ಪಸಾಹೇಬ್ ಮಲ್ಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಖಾದಿ ಮತ್ತು ಗ್ರಾಮೀದ್ಯೋಗ ಘಟಕಗಳ ಉತ್ಪನ್ನಗಳ ಮಾರಾಟದ ಮೇಲೆ ಮೌಲ್ಯವರ್ಧಿತ ತೆರಿಗೆ ಕಾಯ್ದೆ ಯಡಿಯಲ್ಲಿ ತೆರಿಗೆ ವಿನಾಯಿತಿ ನೀಡಲಾಗಿರುತ್ತದೆಂದು ಉತ್ತರವನ್ನು ಕೊಟ್ಟಿರುತ್ತಾರೆ. ಬಿಜಾಪುರ ನಗರದಲ್ಲಿ ಗ್ರಾಮೋದ್ಯೋಗ ಸಂಘಗಳನ್ನು ರಚನೆ ಮಾಡಿಕೊಂಡು ಅದರ ಮುಖಾಂತರ ಎಣ್ಣೆ ಉತ್ಪನ್ನ ಮಾಡಿ ಮಾರಾಟ ಮಾಡುತ್ತಾರೆ. ಅವರಿಗೆ ಇನ್ನೂ ಈ ಒಂದು ತೆರಿಗೆ ವಿನಾಯಿತಿ ಲಭಿಸಿಲ್ಲ ಗ್ರಾಮಾಂತರ ಪ್ರದೇಶಕ್ಕೆ ಸೀಮಿತವಾಗಿಟ್ಟಿದೀರಾ ಎಂದು ನಾನು ಕೇಳಿದ್ದೇನೆ. ಆದರೆ ನಗರಮಟ್ಟದಲ್ಲಿ ಇಲ್ಲವನ್ನುವ ವಿಚಾರವನ್ನೂ ಕೂಡ ಇಲ್ಲಿ ವ್ಯಕ್ತ ಪಡಿಸಿಲ್ಲ. ಮಹಾತ್ಮಗಾಂಧಿಜಿಯವರ ಪ್ರೇರಣೆಯಿಂದ ಪ್ರಾರಂಭವಾದ ಗ್ರಾಮೋದ್ಯೋಗದ ಈ ಸಂಘಗಳನ್ನು ಈ ಮಾರಾಟ ತೆರಿಗೆ ಮುಕ್ತವನ್ನಾಗಿ ಮಾಡುವುದಕ್ಕೆ ಸರ್ಕಾರದಿಂದ ಸ್ಪಷ್ಟವಾದ ಉತ್ತರವನ್ನು ಬಯಸುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಹಿಂದೆ ಈ ಗ್ರಾಮೊದ್ಯೋಗ ಕೈಗಾರಿಕೆಗಳಿಗೆ ಯಾವುದೇ ತೆರಿಗೆ ಇರಲಿಲ್ಲ. ಈ ಕುಸುಬೆಕಾಳು, ಅಡಿಗೆ ಎಣ್ಣೆಹಿಂಡಿಯ ಮೇಲೂ ತೆರಿಗೆ ಇರಲಿಲ್ಲ, ವ್ಯಾಟ್‌ಬಂದ ಮೇಲೆ ಈ ತೆರಿಗೆಭಾರ ಬಿದ್ದಿದೆ, ರೈತನಿಗೆ ಸಂಬಂಧಪಟ್ಟಂಥ ಎಲ್ಲಾ ವಸ್ತುಗಳ ಮೇಲೆ ತೆರಿಗೆ ವಿನಾಯಿತಿಯನ್ನು ವ್ಯಾಟ್ ಮೂಲಕ ಹಾಕಿದ್ದನ್ನು ವಾಪಸ್ ತೆಗೆದುಕೊಂಡು ಕೊಟ್ಟಿದ್ದಾರೆ. ದಯಮಾಡಿ ಹಣಕಾಸಿನ ಸಚಿವರು ಬಂದ ಮೇಲೆ ಅವರ ಮನವೊಲಿಸಿ. ಇದು ಗ್ರಾಮೀಣಪ್ರದೇಶದ ಸಣ್ಣಗುಡಿಕೈಗಾರಿಕೆಗಳಿಂದ ತಯಾರು ಮಾಡುವ ಎಣ್ಣೆಯಾದ್ದರಿಂದ ಹಿಂದೆ ತೆರಿಗೆ ಇರಲಿಲ್ಲ, ವ್ಯಾಟ್‌ನಿಂದ ಹೊರಗಿಟ್ಟು ಈ ತೆರಿಗೆಯನ್ನು ರದ್ದುಮಾಡಿ ಜೀರೋ ಅಂತ ಮಾಡಿ ಅವರಿಗೆ ಒಳ್ಳೆಯವ್ಯವಹಾರವನ್ನು ಮಾಡುವುದಕ್ಕೆ ಗ್ರಾಮೀಣ ಉದ್ಯೋಗ ನಡೆಯುವುದಕ್ಕೆ ಅವಕಾಶ ಮಾಡಿಕೊಡುವುದಕ್ಕೆ ಸಚಿವರು ಬಂದ ಮೇಲೆ ಸಮಾಲೋಚನೆ ಮಾಡಿ ಅಥವಾ ಆಯಿತು ಮಾಡಿಕೊಡುತ್ತೇವೆಂದು ಭರವಸೆಯನ್ನಾದರೂ ಕೊಡಿ.

ಡಾ : ಹೆಚ್.ಸಿ.ಮಹದೇವಪ್ಪ : ಕೇಂದ್ರ ಮಟ್ಟದಲ್ಲಿ ಅಧಿಕಾರಯುಕ್ತ ಒಂದು ಎಂಪವರ್ ಕಮಿಟಿ ಇದೆ, ಆ ದತಪಟ್ಟಿಗಳಂತೆ ಎಣ್ಣೆಕಾಳು, ಖಾದ್ಯತೈಲ ಮತ್ತು ಎಣ್ಣೆಹಿಂಡಿ ಮೇಲೆ ಶೇಕಡ ನಾಲ್ಕರಷ್ಟು ತೆರಿಗೆ ಇದೆ. ಸದರಿ ಸಮಿತಿ ಹಿಂದೆ ತಿಳಿಸಿದಂತೆ ಮಾರಾಟ ತೆರಿಗೆ ವಿನಾಯಿತಿಯನ್ನು ಖಾದಿ ಮತ್ತು ಗ್ರಾಮೊದ್ಯೋಗ ಘಟಕಗಳಿಗೆ ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಡಿಯಲ್ಲಿ ಯಾವುದೇ ತೆರಿಗೆ ವಿನಾಯತಿ ಇರಲಿಲ್ಲ ಹಾಗೂ ಸದರಿ ಘಟಕಗಳು ಖರೀದಿಸುವ ಕಚ್ಚಾಮೂಲ ಮತ್ತು ಉತ್ಪನ್ನಗಳು ಸಾಮಾನ್ಯದಂತೆ ತೆರಿಗೆಗೊಳಿಸುವುದು ಇತ್ತು. ತದನಂತರ ಅಧಿಕಾರಯುಕ್ತ ಸಮಿತಿಯು ತೀರ್ಮಾನ ಕೈಗೊಂಡು ಅದು ರಾಜ್ಯದಲ್ಲೂ ಕೂಡ ದಿನಾಂಕ : 1–5–2005 ರಿಂದ ಮಾನ್ಯತೆಯನ್ನು ಪಡೆದಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಾರಾಟ ಮಾಡುವ ಸರಕುಗಳ ಮೇಲೆ ತೆರಿಗೆ

ವಿನಾಯಿತಿಯನ್ನು ನೀಡಲಾಗಿದೆ. ಅದರಂತೆ ಗ್ರಾಮೋದ್ಯೋಗ ಘಟಕಗಳು ಉತ್ಪಾದಿಸುವ ಎಣ್ಣೆ ಮತ್ತು ಹಿಂಡಿಗಳ ಮೇಲೆ ತೆರಿಗೆ ವಿನಾಯಿತಿ ಇರುತ್ತದೆ. ಆದರೆ ಸದರಿ ಘಟಗಳ ಖರೀದಿಸುವ ಕಚ್ಚಾಮಾಲುಗಳ ಮೇಲೆ ತೆರಿಗೆ ವಿನಾಯಿತಿ ಇರುವುದಿಲ್ಲ. ಬೇರೆಯದಕ್ಕೆಲ್ಲ ತೆರಿಗೆ ವಿನಾಯಿತಿ ಇದ್ದೇ ಇದೆ. ಇತರೆ ಕೈಗಾರಿಕೆಗಳು ಮತ್ತು ಉತ್ಪನ್ನಗಳು ತೆರಿಗೆ ಭರಿಸಬೇಕಾಗಿದ್ದು ಗ್ರಾಮೋದ್ಯೋಗಿ ಘಟಕಗಳು ತೆರಿಗೆ ವಿನಾಯಿತಿ ಹೊಂದಿದ್ದು ಅವುಗಳ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕವಾಗಿರುತ್ತವೆ. ಆದ್ದರಿಂದಾಗಿ ವ್ಯಾಟ್‌ನಿಂದ ಗೃಹಕೈಗಾರಿಕೆಗಳಿಗೆ ಧಕ್ಕೆಯುಂಟಾಗಿದೆ ಎಂಬುದು ಸರಿಯಾಗಿರುವುದಿಲ್ಲ. ಅದರಂತೆ ಗ್ರಾಮೋದ್ಯೋಗ ಘಟಕಗಳು ಖರೀದಿಸುವ ಕಚ್ಚಾಮಾಲುಗಳಮೇಲೆ ತೆರಿಗೆ ವಿಧಿಸಲು ಯಾವುದೇ ಸಕಾರಣಗಳಿಲ್ಲ. ಇದಲ್ಲದೆ ಈಗಾಗಲೇ ಹೇಳಿದಂತೆ ಅಧಿಕಾರಯುಕ್ತ ಸಮಿತಿ ಖಾದಿ ಮತ್ತು ಗ್ರಾಮೋದ್ಯೋಗ ಉತ್ಪನ್ನಗಳ ಮೇಲೆ ಮಾತ್ರ ತೆರಿಗೆ ವಿನಾಯಿತಿ ನೀಡಲು ನಿರ್ಧಾರ ಮಾಡಿದೆ. ಸದರಿ ಘಟಕಗಳಿಗೆ ಖರೀದಿ ಮೇಲೆ ಕೂಡ ರಾಜ್ಯತೆರಿಗೆ ವಿನಾಯಿತಿ ನೀಡಿದಲ್ಲಿ ಅದು ಸಮೀತಿಯ ನಿರ್ಧಾರದ ಉಲ್ಲಂಘನೆಯಾಗುತ್ತದೆ. ನ್ಯಾಷನಲ್ ಎಂಪೌವರ್ ಕಮಿಟಿ ನಿರ್ಧಾರದ ಉಲ್ಲಂಘನೆಯಾಗುವುದರಿಂದ ಆ ಸರಕುಗಳ ಮೇಲೆ ತೆರಿಗೆ ಏನಿದೆ ಆಖದಿ ಮತ್ತು ಗ್ರಾಮೋದ್ಯೋಗ ವಸ್ತುಗಳಿಗೆ ಏನೂ ತೊಂದರೆಯಾಗುವುದಿಲ್ಲ.

ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಲು ಇರತಕ್ಕ ಆರ್ಥಿಕ ನಿರ್ಬಂಧ.

544(6125) ಶ್ರೀ ಸರಿಕಾರ್ ಭೀಮಪ್ಪ ಚನ್ನಪ್ಪ (ರಾಯಬಾಗ್) ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿಕ್ಷಣ ಇಲಾಖೆಯಿಂದ ಪೂರ್ವಾನುಮತಿ ಪಡೆದು ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿಯ ಖಾಲಿ ಇದ್ದ ಹುದ್ದೆಗಳನ್ನು ನಿಯಮಾನುಸಾರ ತುಂಬಿ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದಾಗ ಅದಕ್ಕೆ ಆರ್ಥಕ ನಿರ್ಬಂಧ ಹೇರಿದ್ದು ನಿಜವೇ ?

ಆ) ಈ ಆರ್ಥಿಕ ನಿರ್ಬಂಧವನ್ನು ಹೇರಿದ್ದು ಯಾವಾಗ; ಅದಕ್ಕೆ ಕಾರಣಗಳೇನು ?

ಇ) ಈ ಆರ್ಥಿಕ ನಿರ್ಬಂಧ ತೆರವಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಈ) ಸರ್ಕಾರದ ಈ ಆರ್ಥಿಕ ನಿರ್ಬಂಧದಿಂದಾಗಿ ಗ್ರಾಮಾಂತರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ತೊಂದರೆಯುಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು) :

ಅ) ಆರ್ಥಿಕ ಮಿತವ್ಯಯ ಕ್ರಮಗಳು ಅಕ್ಟೋಬರ್ 2001ರಿಂದಲೂ ಜಾರಿಯಲ್ಲಿವೆ. ಯೋಜನೇತರ ವೆಚ್ಚಗಳನ್ನು ಹತೋಟಿಯಲ್ಲಿಡಲು ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲಗಳನ್ನು ಕ್ರೋಢೀಕರಿಸಲು 2003 ಮತ್ತು 2004ರಲ್ಲಿ ಸಹಾ ಆರ್ಥಿಕ ಮಿತವ್ಯಯ ಕ್ರಮಗಳನ್ನು ಮುಂದುವರೆಸಲಾಯಿತು. ಈ ವಿವಿಧ ಕ್ರಮಗಳಲ್ಲಿ ಹುದ್ದೆಗಳ ಸೃಜನೆ, ನೇರನೇಮಕಾತಿ ಮತ್ತು ಬಡ್ತಿಯಿಂದ ಹುದ್ದೆಗಳನ್ನು ತುಂಬುವ ಪ್ರಕ್ರಿಯೆಗೆ ವಿಧಿಸಿರುವ ಆರ್ಥಿಕ ನಿರ್ಬಂಧವೂ